*

**ಓಎಸ್ ನಂಃ 9/2020**

**ಸಿಡಬ್ಲೂಃ 1**

**ಸಾಕ್ಷಿಗೆ ದಿನಾಂಕ 19-06-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

ಅರ್ಜಿ ಸಂಖ್ಯೆ 4ರ ಮೇಲೆ ಪಾಟೀ ಸವಾಲುಃ ವಾದಿ ಪರ ಶ್ರೀ.ಜಿ.ಎಸ್. ವಕೀಲರಿಂದ

ನಾನು 7ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕಂದಾಯ ದಾಖಲೆಗಳ ಬಗ್ಗೆ ಮಾಹಿತಿ ಇದೆ. ಸಾಕ್ಷಿಗೆ ಈಗ ಸರ್ವೆ ನಂಬರ್ 76*/1ರ 2025-26ರ ಪಹಣಿ ಪತ್ರಿಕೆಯನ್ನು ತೋರಿಸಿ ಅದರ 4ನೇ ಕಾಲಂ ನಲ್ಲಿ ಭೂ ಕಂದಾಯ ರೂ.18.62/- ಇದೆ ಎಂದು ಕೇಳಿದಾಗ ಸಾಕ್ಷಿ ಅದನ್ನು ಒಪ್ಪಿದ್ದು ಆದ ಕಾರಣ ಸದರಿ ಪಹಣಿ ಪತ್ರಿಕೆಯನ್ನು ನಿಬಿ-1 ಎಂದು ಗುರುತಿಸಲಾಯಿತು. ಸರಕಾರದವರು ಇಲ್ಲಿಯವರೆಗೆ ಸದರಿ ಭೂ ಕಂದಾಯವನ್ನು ಬದಲಿಸಿಲ್ಲ ಎಂದರೆ ಸರಿ. ಈ ದಾವೆಯನ್ನು ವಾದಿಯು 2019-20ರಲ್ಲಿ ಸಲ್ಲಿಸಿರುತ್ತಾನೆ. ನಿಸಿ-1 ದಾಖಲೆ 2023-24ಕ್ಕೆ ಸಂಬಂಧಪಟ್ಟಿದ್ದು ಎಂದರೆ ಸಾಕ್ಷಿ 2019-20ಕ್ಕೆ ಸಂಬಂಧಪಟ್ಟಿದ್ದು ಎಂದು ನುಡಿಯುತ್ತಾರೆ. ನಿಸಿ-1ನ್ನು ನಿಮ್ಮ ಪ್ರತಿವಾದ ಪತ್ರದೊಂದಿಗೆ ಹಾಜರುಪಡಿಸಿಲ್ಲ ಎಂದರೆ ಸರಿ. ನಿಮ್ಮ ಪ್ರಮಾಣಪತ್ರದ 4ನೇ ಕಂಡಿಕೆಯಲ್ಲಿ ನೀವು ಹಾಜರುಪಡಿಸಿದ ನಿಸಿ-1 ದಾಖಲೆ 2022-23ರ ದಾಖಲೆ ಎಂದು ನಮೂದು ಮಾಡಿದ್ದೀರಿ ಮತ್ತು ನೀವು ಈಗ ಉತ್ತರ ನೀಡುವಾಗ 2019 ಮತ್ತು 2020ಕ್ಕೆ ಸಂಬಂಧಪಟ್ಟಿದ್ದು ಎಂದು ಹೇಳುತ್ತಿದ್ದೀರಿ 2ರಲ್ಲಿ ಯಾವುದು ಸರಿ ಎಂದು ಕೇಳಿದಾಗ ಸಾಕ್ಷಿ ಸದರಿ ದಾಖಲೆಯು 2019 ಮತ್ತು 20ಕ್ಕೆ ಸಂಬಂಧಪಟ್ಟಿದ್ದು ಎಂದು ನುಡಿಯುತ್ತಾರೆ. ಹಾಗಾದರೆ ನಿಮ್ಮ ಪ್ರಮಾಣಪತ್ರದಲ್ಲಿ ಸುಳ್ಳು ನಮೂದು ಮಾಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ಈ ನ್ಯಾಯಾಲಯಕ್ಕೆ pecuniary jurisdiction ಇಲ್ಲ ಎಂದು ತಪ್ಪಾಗಿ ನಮೂದು ಮಾಡಿದ್ದೀರಿ ಎಂದರೆ ಸರಿಯಲ್ಲ. ನೀವು ನಿಸಿ-1 ದಾಖಲೆಯನ್ನು ಬಿಟ್ಟು ದಾವಾ ಆಸ್ತಿಯ ಮಾರುಕಟ್ಟೆ ಬೆಲೆಯನ್ನು ತೋರಿಸಲು ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನೀವು ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.